ದಿನಾಂಕಃ 09-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್. ಯು. ಎಂ. ವಕೀಲರಿಂದಃ –**

ನಾನು ಎಸ್. ಎಸ್. ಎಲ್.ಸಿ. ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ಮೇಸ್ತ್ರಿ ಕೆಲಸ ಮಾಡುತ್ತೇನೆ. ನನಗೆ ಜಮೀನು ಇರುತ್ತದೆ. ಪ್ರಕರಣ ದಾಖಲು ಮಾಡುವ 4 ವರ್ಷಗಳ ಹಿಂದಿನಿಂದಲೂ ಆರೋಪಿಯ ಪರಿಚಯವಿರುತ್ತದೆ. ಇದೆ ಮೊದಲ ಬಾರಿಗೆ ಆರೋಪಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಹಣವನ್ನು ಆರೋಪಿಯ ಗಂಡನಿಗೆ ನೀಡಿರುತ್ತೇನೆ. ಬಡ್ಡಿ ವ್ಯವಹಾರಕ್ಕೆ ಹಣ ಕೊಟ್ಟಿರುವುದಿಲ್ಲ. ಬೇರೆ ಬೇರೆ ಆರೋಪಿಗಳ ಮೇಲೆ ಇದೇ ನ್ಯಾಯಾಲಯದಲ್ಲಿ 4-5 ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಲ್ಲ.

2. 2022 ರ ಜನೆವರಿಯ 4 ನೇ ವಾರದಲ್ಲಿ ಆರೋಪಿಗೆ ಹಣವನ್ನು ನೀಡಿರುತ್ತೇನೆ. ಆ ಕಾಲಕ್ಕೆ ಭದ್ರತೆಗಾಗಿ ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ದಿಃ05-07-2022 ರಂದು ಹಣ ಕೇಳಲು ಹೋದಾಗ ಸಹಿ ಮಾಡಿದ ಚೆಕ್ಕ ನೀಡಿರುತ್ತಾರೆ. ಸಾಕ್ಷಿದಾರರು ಮುಂದುವರೆದು ಅದಕ್ಕೂ ಮುನ್ನ ಸಾಕಷ್ಟು ಬಾರಿ ಹಣ ವಾಪಸ್ಸು ಕೊಡುವಂತೆ ಕೇಳಿದ್ದೆ ಎಂದು ನುಡಿದಿರುತ್ತಾರೆ. ಆರೋಪಿಯೇ ದಿನಾಂಕ ಹಾಗೂ ಹಣವನ್ನು ನಮೂದಿಸಿ ಸಹಿ ಮಾಡಿ ಕೊಟ್ಟಿರುತ್ತಾರೆ. ಆರೋಪಿಗೆ ರೂ.4,50,000/-ಗಳನ್ನು ಕೈಗಡ ಸಾಲವನ್ನು ನೀಡುವಷ್ಟು ಆದಾಯ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮಾಸಿಕ ರೂ.1,00,000/- ಗಳ ಆದಾಯ ಇರುತ್ತದೆ. ತಿಂಗಳಿಗೆ ಸುಮಾರು 5-6 ಮನೆಗಳ ಸೆಂಟ್ರಿಂಗ್ ಕೆಲಸ ಮಾಡುತ್ತೇನೆ. ಒಂದು ಮನೆಗೆ ಅಂದಾಜು ರೂ.30,000 ರಿಂದ 40,000/- ಗಳನ್ನು ಆದಾಯ ಬರುತ್ತದೆ. ನಾನು ಹೇಳುವ ಹಾಗೇ ಯಾವುದೇ ಆದಾಯ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಆರೋಪಿಗೆ ಹಣ ಕೊಡುತ್ತೇನೆ ಎಂದು ಹೇಳಿ ಖಾಲಿ ಚೆಕ್ಕ ಪಡೆದುಕೊಂಡು ಹೆಚ್ಚಿನ ಹಣ ನಮೂದಿಸಿ ಬ್ಯಾಂಕಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನೊಂದಿಗೆ ಯಾವುದೇ ವ್ಯವಹಾರ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ರೂ. 500 ಮುಖ ಬೆಲೆಯ ನೋಟುಗಳಲ್ಲಿ ರೂ.4,50,000/– ಗಳನ್ನು ನೀಡಿರುತ್ತೇನೆ. ಆರೋಪಿಯು ನನಗೆ ಯಾವುದೇ ಹಣ ಕೊಡುವ ಬಾಧ್ಯತೆ ಹೊಂದಿಲ್ಲದಿದ್ದರು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

ತೆ.ನ್ಯಾ.ದಲ್ಲಿ ಬೆ. ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ.ಹೇ.ಕೆ.ಸರಿ ಇದೆ. ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು